dd-340
T.P-2

Reg. R G No. 155 12-10-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಪ್ರತಿಯಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

SATYAVADI, Daily MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಆರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಇಂಡೋನೇಷಿಯಾಕ್ಕೆ ರಷ್ಯದ ಎಚ್ಚರಿಕೆ

ಎಚ್ಚರಿಕೆ

ಮಾಸ್ಕೊ — ಇಂಡೋನೇಷ್ಯಾದಲ್ಲಿ 1965 ರಲ್ಲಿ ನಡೆದ ವಿದ್ರೋಹ ಪಿತೂರಿಯಲ್ಲಿ ಭಾಗವಹಿಸಿದ್ದ ಕಮ್ಯೂನಿಸ್ಟರನ್ನು ಗಲ್ಲಿಗೇರಿಸಿದರೆ ದುಃಖಿತ ಪರಿಣಾಮ ಪ್ರಾಪ್ತವಾಗುವುದೆಂದು ರಷ್ಯಾ ಇಂಡೋನೇಷಿಯವನ್ನು ಎಚ್ಚರಿಸಿದೆ.

●

ಪಿ ಎಲ್ 480

ಮದರಾಸು— 1970-71 ರ ನಂತರ ಭಾರತವು ಪಿ ಎಲ್ 480 ಆಹಾರ ಆನ್ನು ದು ಇಲ್ಲದೇ ನಿಭಾಯಿಸುವುದೆಂದು ಆಹಾರ ಮಂತ್ರಿ ಶ್ರೀ ಜಗಜೀವನ್ ರಾಂ ಹೇಳಿದರು.

●

ಡಾ || ಮೋದಿ

ನೇತ್ರದಾನಿ ಪದ್ಮಭೂಷಣ ಡಾ || ಎಂ. ಸಿ. ಮೋದಿಯವರು ತಾ | 18 ರಂದು ಮಧ್ಯಾಹ್ನಾತ್ಪರ 1 ಗಂಟೆಗೆ ಬಳ್ಳಾರಿ ಮುನಿಸಿಪಲ್ ಆಫೀಸಿನಲ್ಲಿ ನೇತ್ರ ಪರೀಕ್ಷೆ ನಡೆಸುವರು.

●

ಬಹಳ ಕಡಮೆ

ವಾಷಿಂಗ್ಟನ್— ಪ್ರತಿನಿಧಿ ಸಭೆಯು 1755600000 ವಿದೇಶೀ ನೆರವು ಮಸೂದೆಗೆ ಅನುಮತಿ ನೀಡಿತು — 20 ವರ್ಷಗಳಲ್ಲಿ ಇದು ಅತಿ ಕನಿಷ್ಟ ಸಂಖ್ಯೆ.

★

ಹೆಚ್ಚು ಸಂಬಳಕ್ಕಾಗಿ

ಬಳ್ಳಾರಿ— ಬಳ್ಳಾರಿ ಬಟ್ಟೀ ಗಿರಣಿಯ 300 ಕಾರ್ಮಿಕರು ಹೆಚ್ಚು ಸಂಬಳ ಕೇಳಿಕೆ ಹಾಕಿ ನಿನ್ನೆ ಮುಷ್ಕರಿಸಿ. ಸೋಷಣೆ ಮಾಡುತ್ತಾ ಸೆರೆವಾಸಿಗೆ ನಡೆಸಿ, ಆಡಳಿತ ವರ್ಗಕ್ಕೆ ಮನವಿ ಅರ್ಪಿಸಿದರು.

ಭಾರತದ ರಕ್ಷಣಾ ವ್ಯವಸ್ಥೆ

ಕಾರಕಾಸ್— ಭಾರತವು ರಕ್ಷಣಾ ವ್ಯವಸ್ಥೆಗೆ ಹೆಚ್ಚು ಖರ್ಚು ಮಾಡುತ್ತಿದೆ ಎಂಬುದನ್ನು ಪ್ರಧಾನಿ ಇಂದಿರಾರವರು ನಿರಾಕರಿಸಿದರು — ಚೀನೀಯರು ಏನು ಮಾಡುವರೋ ಹೇಳ್ವುದಕ್ಕಾಗುವುದಿಲ್ಲವಾಗಿ, ಅವರನ್ನು ಎದುರಿಸಲು ಸೂಕ್ತ ಕಾರ್ಯ ಕೈಗೊಳ್ಳಬೇಕಾಗಿದೆ ಎಂದು ತಿಳಿಸಿದರು.

●

ಮಹಿಳೆಯ ದುಷ್ಕೃತ್ಯ

ಕಾನಪುರ— ಓರ್ವ ಎಲೆಕ್ಟ್ರಿಕ್ ಎಂಜಿನಿಯರಿನ ಪತ್ನಿ ಮತ್ತು 6 ಮಕ್ಕಳ ತಾಯಿ ಪ್ರಮಿಳಾ ಎಂಬುವಳು, ಸ್ವರೂಪ ನಗರದಲ್ಲಿ ಸ್ಟೇಟ್ ಬ್ಯಾಂಕಿನ ಅಧಿಕಾರಿಯೊಬ್ಬನ ಪತ್ನಿಯನ್ನು ಕತ್ತುಹಿಸಿಕೆ ಸಾಯಿಸಿ ನಗನಾಣ್ಯ ಅಪಹರಿಸಿದ್ದನು ಪೋಲೀಸರಲ್ಲಿ ಒಪ್ಪಿಕೊಂಡಳು — ಇವಳು ಹೀಗೇ ಇನ್ನೂ ಕೆಲವು ಕಡೆ ಮಾಡಿರುವದೂ ಪ್ರಕಾಶಕ್ಕೆ ಬಂದಿದೆ.

★

500 ಮಂದಿ ಸಾವು

ಕಲ್ಕತ್ತಾ— ಉತ್ತರ ಬಂದಾಳದ ಡಾರ್ಜಿಲಿಂಗ್ ಹತ್ತಿರದ ಒಂದು ಚಿಕ್ಕ ಪಟ್ಟಣದಲ್ಲಿ 500 ಮಂದಿ ಪ್ರವಾಹದಲ್ಲಿ ಕೊಚ್ಚಿಹೋದರು.

★

ಮುಸ್ಲಿಂ ಜಿಲ್ಲೆ

ಕಲ್ಲಿಕೋಟೆ— ಮಲಬಾರಿನಲ್ಲಿ ಮುಸ್ಲಿಂ ಬಹುಸಂಖ್ಯಾತ ಜಿಲ್ಲೆ ಸ್ಥಾಪನೆ ನಿಶ್ಚಿತವಾಗಿದ್ದು, ಅದರಲ್ಲಿ ಕೋಸಿಕೋಡಿನ ಎರ್ನಾಡು ಮತ್ತು ತಿರೂರು ತಾಲ್ಲೂಕುಗಳೂ ಮತ್ತು ಪಾಲ್ಘಾಟು ಜಿಲ್ಲೆಯ ಪೆರಿಂಟಾಲ್‌ಮುನ್ನ ಮತ್ತು ಪೊನ್ನಾನಿ ತಾಲ್ಲೂಕುಗಳೂ ಸೇರುವದೆಂದು ಹೇಳಲಾಗಿದೆ.

●

ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯ

ಪ್ಯಾರಿಸ್— ವಿಶ್ವವಿದ್ಯಾಲಯಗಳ ಸುಧಾರಣಾ ಮಸೂದೆ ಮಂಜೂರಾಯಿತು — ಇದರಿಂದ ಫ್ರೆಂಚ್ ವಿಶ್ವವಿದ್ಯಾಲಯಗಳು ಸರಕಾರದ ಹತೋಟಿಯಿಂದ ಬಹುಮಟ್ಟಿಗೆ ಬಿಡುಗಡೆಹೊಂದುವವು — ಅವುಗಳ ಆಡಳಿತದಲ್ಲಿ ವಿದ್ಯಾರ್ಥಿಗಳಿಗೆ ಅಧಿಕಾರ ದೊರೆಯುವುದು ಮತ್ತು ವಿಶ್ವವಿದ್ಯಾಲಯ ಭಾಗಗಳಲ್ಲಿ ರಾಜಕೀಯ ಚರ್ಚೆಗೆ ಅವಕಾಶ ವಿದಿ.

★

ಲಾಟರಿಗಳು

ನವದೆಹಲಿ— ರಾಜ್ಯಗಳು ನಡೆಸುತ್ತಿರುವ ಲಾಟರಿಗಳ ರಾಜ್ಯಾಂಗ ನ್ಯಾಯ ಸಮ್ಮತಿ ಬಗ್ಗೆ ಸ್ವತಂತ್ರ ಪಕ್ಷ ನಾಯಕ ಶ್ರೀ ರಾಜಗೋಪಾಲಾಚಾರಿಯವರು ಎತ್ತಿರುವ ಸಂಶಯ ವಿಷಯವನ್ನು ಕೇಂದ್ರ ಪರಿಶೀಲಿಸುತ್ತಿದೆ.

●

ಮತ್ತಷ್ಟು ಅಕ್ಕಿ

ಬ್ಯಾಂಗಕಾಕ್— ತಾಯ್ಲಾಂಡಿನಿಂದ ಮತ್ತಷ್ಟು ಅಕ್ಕಿ ಪಡೆಯಲು ಭಾರತ ಚೌಕಾಶಿ ಮಾಡುತ್ತಿದೆ — ಈಗಾಗಲೇ 140 ಸಾವಿರ ಟನ್ ಅಕ್ಕಿ ಪಡೆಯಲಾಗಿದೆ.

ಸತ್ಯವಾದಿಯ ಸ್ವರ್ಣೋತ್ಸವ

"ಸತ್ಯವಾದಿ"ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಕಾಶ್ಮೀರ ಸಮಸ್ಯೆ

ಶ್ರೀನಗರ— ಕಾಶ್ಮೀರ ಸಮಸ್ಯೆ ಪರಿಹಾರಕ್ಕೆ ಭಾರತ, ಪಾಕಿಸ್ತಾನ ಮತ್ತು ಕಾಶ್ಮೀರ ಪ್ರತಿನಿಧಿಗಳ ದುಂಡುಮೇಜು ಸಮ್ಮೇಳನ ನಡೆಯಲೆಂದು ಷೇಕ್ ಅಬ್ದುಲ್ಲರು ರಾಜ್ಯದ ಜನತಾ ಸಮ್ಮೇಳನದಲ್ಲಿ ಅಧ್ಯಕ್ಷ ಭಾಷಣದಲ್ಲಿ ಸೂಚಿಸಿದರು.

★

14 ವರ್ಷಗಳ ಸಜ

ಜಯಪುರ— ಪಾಕಿಸ್ತಾನಕ್ಕೆ ಸಹಾಯ ಮಾಡುವದಕ್ಕಾಗಿ, ರಾಜ್ಯದ ಹಿತ ಮತ್ತು ಸುರಕ್ಷತೆಗೆ ಧಕ್ಕೆ ಉಂಟಾಗುವಂತೆ ಕಾರ್ಯ ನಡೆಸಿದ ರಾಜ್ಯದ ಮಾಜಿ ಉಪ ಗೃಹ ಸಚಿವ ಮುಸುರುದ್ದಿ ಕುರೇಷಿಗೂ, ಮತ್ತೊಬ್ಬನಾದ ಕ್ಯೂಟಿ ಬುರ್ಡಗೂ ತಲಾ 14 ವರ್ಷ ಕಠಿಣ ಸಜಾ ವಿಧಿಸಲಾಯಿತು — ಇವರೊಡನೆ ಸಾಮಿಲಾಗಿದ್ದ ಮತ್ತೊಬ್ಬ ರಷ್ಯೀಯ ಅಬ್ದುಲ್ ಅಜೀಜಿಗೆ 5 ವರ್ಷ ಕಠಿಣ ಸಜಾ ವಿಧಿಸಲಾಯಿತು.

★

ವಿಶ್ವವಿದ್ಯಾಲಯಕ್ಕೆ ಕಂಪ್ಯೂಟರ್

ಮೈಸೂರು— ಪರೀಕ್ಷೆ ಫಲಿತಾಂಶವನ್ನು ಬೇಗೆ ಬಗೆಹರಿಸಲು ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರುಗಳನ್ನು ಇಡಲಾಗುವದೆಂದು ತಿಳಿಯಬಂದಿದೆ.

★

ಬೌದ್ಧ ಸಮ್ಮೇಳನ

ಬೊಂಬಾಯಿ— ಭಾರತೀಯ ಬೌದ್ಧ ಸಮ್ಮೇಳನವು ತಾ|| 23 ರಿಂದ 2 ದಿನಗಳು ನಡೆವುದು — ಭಾರತದ ಎಲ್ಲಾ ಭಾಗಗಳಿಂದಲೂ, 3000 ಪ್ರತಿನಿಧಿಗಳೂ ಸೇರಿ 3 ಲಕ್ಷ ಬೌದ್ಧರು ಬರಲಿರುವರು ; 30 ಮಂದಿ ಭಿಕ್ಕುಗಳೂ ಆಗಮಿಸುವರು.

○

ಹಿಂದೂಗಳ ಆಚಾರ

ಗ್ರಾಹಕರು – ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

' ಯತೋಭ್ಯುದಯ ನಿಶ್ರೇಯಸಃ ಸಿದ್ಧಿಃ ಸಧರ್ಮಃ '

ಯಾವ ನಿಯಮದಿಂದಾಗಿ ಜಗತ್ತು ಸುವ್ಯವಸ್ಥೆಯಿಂದ ನಿಂತಿದೆಯೊ, ಯಾವ ನಿಯಮದಿಂದ ಇಹದಲ್ಲಿಯೂ, ಪರದಲ್ಲಿಯೂ ವ್ಯಕ್ತಿಯ ಹಾಗೂ ಸಮಾಜದ ಪತನವಾಗದೇ ಉದ್ಧಾರವೇ ಆಗುವದೋ, ಯಾವುದರಿಂದ ಪರಮೋದ್ಧಾರ ರೂಪವಾದ ಮೋಕ್ಷವು ಲಭಿಸುವುದೋ ಆ ನಿಯಮಕ್ಕೆ ಧರ್ಮವೆಂದು ಹೆಸರು.

ಈ ವಾಕ್ಯಗಳಿಂದ ಈ ಲೋಕದಲ್ಲಿ ಎಲ್ಲವೂ ಸುವ್ಯವಸ್ಥೆಯುಳ್ಳದಾಗಿಬೇಕಾದರೆ ಅದು ಧರ್ಮದಿಂದ ಮಾತ್ರ ಸಾಧ್ಯ ಎಂದು ತಿಳಿಯಬಹುದು. ಆ ರೀತಿ ಸುವ್ಯವಸ್ಥೆಯಾಗಿದ್ದರೆ ಮಾತ್ರ ಮನುಷ್ಯನಿಗೆ ಸುಖಶಾಂತಿಗಳು ದೊರಕಬಲ್ಲದು. ನಮ್ಮ ದೇಶದ ಹಿಂದಿನ ಕಾಲದ ಸ್ಥಿತಿ ಈಗಿನ ಕಾಲದ ಸ್ಥಿತಿಗಳನ್ನು ಗಮನಿಸಿದಲ್ಲಿ, ಹಿಂದೆ ಜನರಿಗೆ ಸುಖ, ಶಾಂತಿ, ನೆಮ್ಮದಿ ಚೆನ್ನಾಗಿತ್ತು. ಈಗ ಆ ಪರಿಸ್ಥಿತಿಯಿಲ್ಲ ಎಂದು ಗಮನಿಸಬೇಕಾಗಿದೆ. ಆದುದರಿಂದ ಹಿಂದೆ ಇದ್ದಂಥಾ ಸುವ್ಯವಸ್ಥೆ ಈಗ ಇಲ್ಲವೆಂದಾಯಿತು. ಇದಕ್ಕೆ ಕಾರಣ ಜನಗಳು ಧರ್ಮದಿಂದೂ ದೂರ ಹೋಗುತ್ತಿರುವುದೇ ಎಂದು ಹೇಳಬಹುದಾಗಿದೆ. ಧರ್ಮದಲ್ಲಿ ಮೊದಲನೆಯ ಧರ್ಮ ಆಚಾರ ಎಂದು ಭೀಷ್ಮಾಚಾರ್ಯರು ಅಪ್ಪಣೆ ಕೊಡಿಸಿದ್ದಾರೆ. ಅಂದರೆ ಆಚಾರವನ್ನು ಅನುಷ್ಠಿಸುತ್ತ ಅದರಲ್ಲಿ ಚೆನ್ನಾಗಿ ಸಿದ್ಧಿಯನ್ನು ಪಡೆದವನು ಮಾತ್ರ ಧರ್ಮದ ಮೊದಲನೇ ತರಗತಿಯಲ್ಲಿ ತೇರ್ಗಡೆ ಆದನೆಂದು ಹೇಳಬಹುದು. ಆಚಾರವು ಮೊದಲನೆಯ ಧರ್ಮವಾದರೆ ಎರಡು, ಮೂರು, ನಾಲ್ಕನೆಯ ಧರ್ಮವಾವುದು ಎಂದು ಪ್ರಶ್ನೆ ಏಳಬಹುದು ?

ಮೈಸೂರು

ದಸರಾ ವಸ್ತುಪ್ರದರ್ಶನ

1968

ವಿಶೇಷ ಮನರಂಜನೆಯ ಕಾರ್ಯಕ್ರಮ

ದಿನಾಂಕ ೧೨ನೇ ಅಕ್ಟೋಬರ್ ಶನಿವಾರ ಸಂಜೆ

7 ಘಂಟೆಗೆ

ಶ್ರೀಮತಿ ಡಿ. ಕೆ. ಪಟ್ಟಮ್ಮಾಳ್ ಮದರಾಸು ಇವರಿಂದ

ಅಮೋಘ ಸಂಗೀತ ಕಛೇರಿ

ವಸ್ತು ಪ್ರದರ್ಶನದ ಕಲಾಕ್ಷೇತ್ರದಲ್ಲಿ ಏರ್ಪಡಿಸಿರುತ್ತೆ

ಪ್ರವೇಶದರ—50 ಪೈಸೆ

ಓರಿಯಂಟಲ್ ಡ್ರಾನ್ಸ್

ಮೈಸೂರು ದಸರಾ ವಸ್ತುಪ್ರದರ್ಶನ ನಡೆಯುತ್ತಿರುವ

ಜೀವಣರಾಯನ ಕಟ್ಟೆಯಲ್ಲಿ

ಚಿತ್ರತಾರೆಗಳಿಂದ ಅಮೋಘ ನರ್ತನಗಳು

ತಪ್ಪದೇ ನೋಡಿ ಆನಂದಿಸಿರಿ

ಪ್ರವೇಶಧನ : ರೂ. 1 ಮತ್ತು 50 ಪೈಸೆ

Edited, Printed & Published by Dharmapracharа Nirata M S Krishna Rao (Proprietor) at the Satvavadi Press Chamarrajpuram, Mysoe 4

ದಸರಾ ವಸ್ತುಪ್ರದರ್ಶನ

1968

ವಿಶೇಷ ಮನರಂಜನೆಯ ಕಾರ್ಯಕ್ರಮ

ದಿನಾಂಕ ೧೩ನೇ ಅಕ್ಟೋಬರ್ ಭಾನುವಾರ

ಸಂಜೆ 7 ಘಂಟೆಗೆ

ಶ್ರೀಯುತ ಎಸ್. ಕೃಷ್ಣರಾವ್ ಮತ್ತು ಶ್ರೀಮತಿ ಚಂದ್ರಭಾಗದೇವಿ, ಬೆಂಗಳೂರು ಇವರಿಂದ

ಅಮೋಘ ನೃತ್ಯ ಪ್ರದರ್ಶನವನ್ನು

ವಸ್ತುಪ್ರದರ್ಶನದ ಕಲಾ ಕ್ಷೇತ್ರದಲ್ಲಿ ಏರ್ಪಡಿಸಿರುತ್ತೆ

ಪ್ರವೇಶ ದರ 50 ಪೈಸೆ

ವುಡ್‌ಲಾಂಡ್ ಜನಪ್ರಿಯ 5 ನೇ ವಾರ

ವೈಭವ ಆರಂಭ

— ಮನಮೋಹಕ ಹಿಂದಿ ಚಿತ್ರ —

ನೀಲ್ ಕಮಲ್ ★ Neel Kamal

ಈಸ್ಟ್‌ಮನ್ ಕಲರ್

.... ಮಿಲಿಯುಗಟ್ಲೆ ಖುಷಾಯಿನ ಆತ್ಯಾಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್

ಬಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಶಿಕಲಾ, ಮಹಮೂದ್

ಆಪೆರ— 11-10 68 ರಿಂದ

ಮನಮೋಹಕ ತಮಿಳು ಚಿತ್ರ — — ದಿನವಹಿ 3 ಆಟಗಳು

ನೇರ್ ವಳಿ

ನಟವರ್ಗ– ಜಯಶಂಕರ್, ಆನಂದ್, ಮನೋಹರ್, ನಾಗೇಶ್, ಸುಂದರರಾಜ್

ವಾಣಿಶ್ರೀ, ಚಂದ್ರಿಕಾ, ಮನೋರಮ, ವಿಜಯಲಲಿತ

Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳನ್ನೂ ಸಿದ್ಧವಾಗಿ ದೊರೆಯುವ ಕ್ಷಿ

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ